ಇ) ಉಳಿದ 40 ಲಕ್ಷ ರೂಪಾಯಿಗಳಲ್ಲಿ ಪ್ರಚಾರ ಸಾಮಗ್ರಿಗಳ ಮುದ್ರಣಕ್ಕಾಗಿ ಒಟ್ಟು 11.46 ಲಕ್ಷ ರೂಪಾಯಿಗಳ ವೆಚ್ಚ ಮಾಡಲಾಗಿದೆ.

ಈ) ಹೌದು, ಪೋಸ್ಟರ್ ಮತ್ತು ನಾಲ್ಕು ಭಾಷೆಯ ಡಿಸ್‌ಪ್ಲೇ ಕಾರ್ಡ್‌ಗಳನ್ನು ರೂ. 10.56 ಲಕ್ಷ ಹಣದಲ್ಲಿ ಟೆಂಡರ್ ನಿಯಮಾವಳಿಯಂತೆ ಮುದ್ರಿಸಿ ಪಡೆಯಲಾಗಿದೆ. ಅಲ್ಲದೇ ರೂ: 0.90 ಲಕ್ಷ ಹಣದಲ್ಲಿ ಕಾಗದ ಖರೀದಿಸಿ ಇಲಾಖಾ ಮುದ್ರಣಾಲಯದಲ್ಲಿಯೂ ನಾನಾ ರೀತಿಯ ಸಾಮಗ್ರಿಗಳನ್ನು ಮುದ್ರಿಸಲಾಗಿದೆ.

ಉ) ಪಲ್ಸ್ ಪೋಲಿಯೋ ಕಾರ್ಯಕ್ರಮದಲ್ಲಿ ಹಣ ದುರುಪಯೋಗವಾಗಿಲ್ಲ.

ವೈದ್ಯಕೀಯ ಶಿಕ್ಷಣ ಸಂಸ್ಥೆಗಳಿಗೆ ಕ್ಲಿನಿಕಲ್ ಸೌಲಭ್ಯ

72 (158)

ಶ್ರೀ ಯು.ಆರ್.ಸಭಾಪತಿ (ಉಡುಪಿ): ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಖಾಸಗೀ ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ಒಟ್ಟು ಸಂಖ್ಯೆ ಎಷ್ಟು?

ಆ) ಅವುಗಳಲ್ಲಿ ಎಷ್ಟು ವೈದ್ಯಕೀಯ ಶಿಕ್ಷಣ ಸಂಸ್ಥೆಗಳಿಗೆ ತನ್ನದೇ ಆದ ಕ್ಲಿನಿಕಲ್ ಸೌಲಭ್ಯವಿದೆ?

ಇ) ಸೌಲಭ್ಯವಿಲ್ಲದ ಸಂಸ್ಥೆಗಳು ಸ್ವಂತ ಸೌಲಭ್ಯವನ್ನು ಪಡೆಯಲು ಕ್ರಮ ತೆಗೆದುಕೊಂಡಿರುವುದರ ಬಗ್ಗೆ ಸರ್ಕಾರದ ನಿಲುವೇನು? (ವಿವರ ನೀಡುವುದು)

ಡಾ॥ ಎಂ.ಶಂಕರ್‌ನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು):

ಅ) ರಾಜ್ಯದಲ್ಲಿ 14 ಖಾಸಗೀ ವೈದ್ಯಕೀಯ ಶಿಕ್ಷಣ ಸಂಸ್ಥೆಗಳಿವೆ.

ಆ) 5 ಖಾಸಗೀ ವೈದ್ಯಕೀಯ ಶಿಕ್ಷಣ ಸಂಸ್ಥೆಗಳು ತನ್ನದೇ ಆದ ಕ್ಲಿನಿಕಲ್ ಸೌಲಭ್ಯ ಹೊಂದಿವೆ.

ಇ) ಕ್ಲಿನಿಕಲ್ ಸೌಲಭ್ಯ ಪಡೆಯಲು ನೀಡುವ ಸರ್ಕಾರದ ಆದೇಶದಲ್ಲಿ ನಿಗದಿತ ಸಮಯದಲ್ಲಿ ಸ್ವಂತ ಸೌಲಭ್ಯ ಏರ್ಪಡಿಸಿಕೊಳ್ಳಬೇಕೆಂದು ಸರ್ಕಾರದ ಆದೇಶದಲ್ಲಿ ಸ್ಪಷ್ಟ ಪಡಿಸಲಾಗಿರುತ್ತದೆ. ಖಾಸಗೀ ಸಂಸ್ಥೆಗಳು ಸ್ವಂತ ಸೌಲಭ್ಯ ಪಡೆದುಕೊಳ್ಳಬೇಕೆಂಬುದೇ ಸರ್ಕಾರದ ನಿಲುವಾಗಿರುತ್ತದೆ.